ಶ್ರೀ ಬಿ. ಬಸವಲಿಂಗಪ್ಪ.— ಮಾನ್ಯ ಅಧ್ಯಕ್ಷರೇ, ಬಂಗಾರಪ್ಪನವರು ಹೇಳಿದ ಮಾತಿಗೆ ಮನ್ನಣೆ ಕೊಟ್ಟು, ಮಂಂದಿನ ವರ್ಷ ಇದಂ ಇಲ್ಲಿ ಆಚರಣೆಯಾಗುತ್ತದೆಂದು ಹೇಳಿದ್ದೀರಿ. ತಾವೂ ಸಹ ಬಂದು ಬಿಟ್ಟು ಅಲ್ಲಿಗೆ ಹೋಗಿದ್ದೀರಿ ಎಂದಂ ಇಟ್ಟುಕೊಳ್ಳೋಣ. ಆದರೆ ಬಹಳ ಜನ ಬರಂತ್ತಾರೆ ಎಂದಂ ಹೊರಗಡೆ ಮಾಡಿದ್ದೇವೆ ಎಂದು ಹೇಳುವುದು ಸರಿಯಲ್ಲ. ಈ ಮನೆಗೆ ಸಾರ್ವಭೌಮತ್ವ ಇದೆ. ಕರ್ನಾಟಕ ರಾಜ್ಯದ ಸಾರ್ವಭೌಮತ್ವ ಇಲ್ಲಿದೆ. ನಾವು ಇಲ್ಲಿ ಮಾಡಿದರೆ ಇಡೀ ಕರ್ನಾಟಕ ರಾಜ್ಯದ ಎಲ್ಲರ ಪರವಾಗಿ ಮಾಡಿದಹಾಗೆ ಆಗುತ್ತದೆ.

ಅಧ್ಯಕ್ಷರು.— ನನಗೆ ಸಹಿತ ಇಂಟಿಮೇಷನ್ ಬಂದಿಲ್ಲ. ಸೆಕ್ರೆಟರಿಯವರು ಅಲ್ಲಿ ಇಟ್ಟಿದ್ದಾರೆ ಎಂದು ಹೇಳಿದಮೇಲೆ ಅಲ್ಲಿಗೆ ಹೋದರೆ. ನೆಕ್ಸ್ಟ್ ಟೈಮ್ ನಾನು ಇಲ್ಲಿ ಮಾಡುತ್ತೇನೆ.

ಈಗ ಪ್ರಶ್ನೋತ್ತರ ತೆಗೆದುಕೊಳ್ಳೋಣ.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಅಧ್ಯಕ್ಷರು.—ಪ್ರಶ್ನೆ ಸಂಖ್ಯೆ ೧೨೩(೧೭) ಮಾನ್ಯ ಸದಸ್ಯರು ಗೈರು ಹಾಜರಿ.

ಪ್ರಶ್ನೆ ಸಂಖ್ಯೆ ೧೨೪(೧೨೨) ಮಂಂದೂಡಲಾಗಿದೆ.ಅಧ್ಯಕ್ಷರು.—ಮಾನ್ಯ ಮೊಯಿನುದ್ದೀನ್‌ರವರೇ ತಮ್ಮ ಪ್ರಶ್ನೆಯನ್ನು ಮಂಂದೂಡಲಾಗಿದೆ.

ಶ್ರೀ ಮಹಮ್ಮದ್ ಮೊಯಿನುದ್ದೀನ್.—ಮಾನ್ಯ ಅಧ್ಯಕ್ಷರೇ, ನನ್ನದು ಒಂದು ಸಬ್‌ಮಿಷನ್ ಇದೆ. ಹೋದ ಅಧಿವೇಶನದಲ್ಲಿ ಇದೇ ಪ್ರಶ್ನೆ ಕೊಟ್ಟಿದ್ದೆ. ಆಗಲೂ ಸಹ ಇದಂ ಕ್ಯಾರೀಡ್ ಓವರ್ ಆಯಿತಂ. ಅಧಿವೇಶನ ಮುಗಿದು ಆಠು ತಿಂಗಳಾಗಿದೆ. ಇವತ್ತೂ ಸಹ ಕ್ಯಾರೀಡ್ ಓವರ್ ಎಂಡರೆ ಹೇಗೆ ? ಇದಂ ಬಹಳ ಪ್ರಾಮುಖ್ಯವಾದ ಕೊಶ್ಚನ್. ಎಲ್ಲರೂ ರೂರಲ್ ಪಾವರಿಟಿ ಮೇಲೆ ಮಾತ ನಾಡುತ್ತಾರೆಯೇ ಹೊರತು, ಅರ್ಬನ್ ಪಾವರ್ಟಿ ಮೇಲೆ ಯಾರೂ ಏನೂ ಮಾಡುತ್ತಿಲ್ಲ. ಈ ಕೊಶ್ಚನ್ ೮ ತಿಂಗಳಿಂದ ಕ್ಯಾರೀಡ್ ಓವರ್ ಆಗುತ್ತಿದೆ ಎಂದರೆ ಬಹಳ ಕಷ್ಟವಾಗಂತ್ತದೆ.

MR. SPEAKER.—I have taken care of your suggestion.

ಅಂತರ ರಾಜ್ಯ ಸಾರಿಗೆ ಪರವಾನಿಗೆಗಳು

೩೭೭. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಸಾರಿಗೆ ಹಾಗೂ ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ರಾಜ್ಯದ ನೆರೆಯ ರಾಜ್ಯಗಳು ಅಂದರೆ ತಮಿಳ್ನಾಡು, ಆಂಧ್ರ, ಮಹಾರಾಷ್ಟ್ರ, ಕೇರಳ ರಾಜ್ಯ ಗಳೊಡನೆ ಒಪ್ಪಂದ ಅಂತರ ರಾಜ್ಯ ಬಸ್ಸು ಮಾರ್ಗಗಳಿಷ್ಟಿವೆ ಹಾಗೂ ಲಾರಿಗಳಿಷ್ಟಿವೆ ?

ಆ) ಹಾಲಿ ಮಂಜೂರಾಗಿರುವ ಪರವಾನಿಗೆಗಳಿಗೆ ಅಂತರ ರಾಜ್ಯದ ಒಪ್ಪಂದ ಆಗಿದೆಯೆ ?

ಇ) ಹಾಗಿದ್ದಲ್ಲಿ, ಕೆ. ಎಸ್. ಆರ್. ಟಿ. ಸಿ. ಬಸ್‌ಗಳಿಗೆಷ್ಟಾಗಿದೆ ಹಾಗೂ ಖಾಸಗೀ ಬಸ್ಸು ಗಳಿಗೆಷ್ಟಾಗಿದೆ ಮತ್ತು ಲಾರಿಗಳಿಗೆಷ್ಟಾಗಿದೆ ?

ಈ) ೧೫ ಕಿಲೋಮೀಟರ್ ಒಳಗಾಗಿ ನೆರೆ ರಾಜ್ಯಗಳಿಗೆ ಹೋಗುವ ಬಸ್ಸುಗಳಿಗೆ ಎದುರು ರುಜು ಇಲ್ಲದೆ ಓಡಿಸಲು ಪರವಾನಿಗೆ ನೀಡುವ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು, ಹಾಗೂ ಈ ಬಗ್ಗೆ ನೆರೆ ರಾಜ್ಯಗಳೊಡನೆ ಒಪ್ಪಂದ ಆಗಿದೆಯೆ ?

ಉ) ಹಾಗಿದ್ದಲ್ಲಿ, ಸರ್ಕಾರದವರು ಈ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಹಾಗೂ ವಸತಿ ರಾಜ್ಯ ಸಚಿವರು).—

ಅ)	ರಾಜ್ಯಗಳು	ಮಾರ್ಗಗಳ ಸಂಖ್ಯೆ	ಪಾರಿಗಳ ಸಂಖ್ಯೆ
೧)	ಕರ್ನಾಟಕ/ತಮಿಳ್ನಾಡು		
	ಕರ್ನಾಟಕದಿಂದ	೪೬	೩೧೫೦
	ತಮಿಳ್ನಾಡಿನಿಂದ	೩೫	೩೧೫೦
೨)	ಕರ್ನಾಟಕ/ಆಂಧ್ರ		
	ಕರ್ನಾಟಕದಿಂದ	೨೧೪	೪೪೦೦
	ಆಂಧ್ರದಿಂದ	೧೬೭	೪೪೦೦
೩)	ಕರ್ನಾಟಕ/ಮಹಾರಾಷ್ಟ್ರ		
	ಕರ್ನಾಟಕದಿಂದ	೧೪೮	೪೮೫೦
	ಮಹಾರಾಷ್ಟ್ರದಿಂದ	೧೯೦	೪೮೫೦
೪)	ಕರ್ನಾಟಕ/ಕೇರಳ		
	ಕರ್ನಾಟಕದಿಂದ	೪೫	೧೧೦೦
	ಕೇರಳದಿಂದ	೨೩	೧೧೦೦

ಆ) ಇಲ್ಲ.

ಇ) ಮೇಲಿನ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಉ) ಮೇಲಿನ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ತಮಿಳುನಾಡು, ಆಂಧ್ರ ಮತ್ತು ಕರ್ನಾಟಕದ ನಡುವೆ ಆಗಿರುವಂತಹ ಒಂದು ಅಗ್ರಿಮೆಂಟ್ ಪ್ರಕಾರ ಮೈಲೇಜ್ ಪ್ಯಾರಿಟಿ ಇದೆ. ಅದರ ಪ್ರಕಾರ ತಮಿಳುನಾಡು ೩೦೦ ಕಿಲೋಮೀಟರ್ ಇದ್ದರೆ, ಕರ್ನಾಟಕಕ್ಕೆ ೩೦ ಕಿಲೋಮೀಟರ್ ಮಾತ್ರ ಇದೆ. ತಮಿಳುನಾಡು ಬಸ್ ಜಾಸ್ತಿ ಓಡಾಡುತ್ತಿದೆ. ಕೆ. ಎಸ್. ಆರ್. ಟಿ ಸಿ. ಬಸ್‌ಗಳು ಕಡಿಮೆ ಓಡಾಡುತ್ತಿವೆ. ಇದು ನಿಜವೇ ? ಅಲ್ಲದೇ ಇದರಿಂದ ನಮ್ಮ ಬೊಕ್ಕಸಕ್ಕೆ ಬಹಳ ನಷ್ಟ ಆಗಿಲ್ಲವೇ ? ಇದನ್ನು ೧೫ ಕಿಲೋಮೀಟರ್ ಮಾಡಿದರೆ ನೆಮ್ಮ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಅನುಕೂಲ ಉಂಟು. ಬೇರೆ ರಾಜ್ಯಕ್ಕೂ ಅನುಕೂಲ ಉಂಟು ಇದನ್ನು ೧೫ ಕಿಲೋಮೀಟರ್ ಮಾಡುವ ಬಗ್ಗೆ ಪರಿಶೀಲಿಸುತ್ತೇವೆಂದು ಹೇಳಿದ್ದಾರೆ, ಇದನ್ನು ಯಾವಾಗ ಪರಿಶೀಲಿಸುತ್ತೀರಿ ? ಜೊತೆಗೆ ತಮಿಳುನಾಡು ಆಂಧ್ರ ಬಸ್‌ಗಳು ಯಾವಾಗಲೂ ಓವರ್ ಲೋಡ್ ಆಗಿ ಓಡಾಡುತ್ತಿವೆ. ಅದೇ ಕೆ.ಎಸ್ ಆರ್.ಟಿ.ಸಿ. ಬಸ್‌ಗಳು ಖಾಲಿ ಓಡುತ್ತಿವೆ. ಜನಗಳೇ ಇರುವುದಿಲ್ಲ. ಇದಕ್ಕೆ ಕಾರಣ ಟೈಮ್ಸ್ ಸರಿಯಾಗಿ ಕೊಟ್ಟಿಲ್ಲ. ಹಾಗೂ ಮೈಲೇಜ್ ಪ್ಯಾರಿಟಿ ಇದೆ. ಈಗ ಇರತಕ್ಕಂಥಾದ್ದು ಅಡ್ವಾಂಟೇಜ್ ಆಗಿಲ್ಲ, ಬಹಳ ನಷ್ಟದಲ್ಲಿ ಇದೆ, ಇದನ್ನು ಒಪ್ಪುತ್ತೀರಾ ?

ಶ್ರೀ ಪಿ ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ವೆಂಕಟರಾಮಯ್ಯನವರು ಈ ಬಗ್ಗೆ ಪ್ರಶ್ನೆ ಕೇಳುತ್ತಿರುವುದು ಬಹಳ ಸಂತೋಷದ ವಿಚಾರ. ಕೆ.ಎಸ್.ಆರ್.ಟಿ.ಸಿ. ಗೆ ಲಾಭ ಮಾಡಬೇಕೆಂಬ ದೃಷ್ಟಿಯಿಂದ ಅವರು ಸಲಹೆಗಳನ್ನು ಕೊಟ್ಟಿದ್ದಾರೆ. ಅದನ್ನು ನಾನು ತೆಗೆದುಕೊಳ್ಳುತ್ತೇನೆ, ಹಾಗೂ ಅವರು ಸಹಕಾರ ಕೊಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಕಿಲೋಮೀಟರ್ ಪ್ಯಾರಿಟಿ ಬಗ್ಗೆ ಕೇಳಿದ್ದಾರೆ. ಅಗ್ರಿಮೆಂಟ್‌ನಲ್ಲಿ ಏನು ಹೇಳಿದ್ದಾರೆ ಎಂದರೆ.....

ಶ್ರೀ ಬಿ ಬಸವಲಿಂಗಪ್ಪ.—ಅವರು ಪ್ರಶ್ನೆ ಕೇಳಿದ್ದಾರೆ. ಉತ್ತರ ಕೊಡಿ. ಭಾಷಣ ಮಾಡಿದಿಟ್ಟು ಉತ್ತರ ಕೊಡುವುದಿಲ್ಲ.

ಅಧ್ಯಕ್ಷರು.—ಮಾನ್ಯ ಬಸವಲಿಂಗಪ್ಪನವರೇ ಸಮಾಧಾನವಾಗಿ ಇರಿ. ತಾವು ದಯವಿಟ್ಟು ಕಂಳಿತುಕೊಳ್ಳಿ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ, ಕಿಲೋಮೀಟರ್ ಪ್ಯಾರಿಟಿ ಬಗ್ಗೆ ಇದುವರೆಗೆ ಆಗಿರತಕ್ಕಂಥ ಇಂಟರ್‌ಸ್ಟೇಟ್ ಅಗ್ರಿಮೆಂಟ್, ಕಿಲೋಮೀಟರ್ ಪ್ಯಾರಿಟಿ ಇರಲಿಲ್ಲ ಪಕ್ಕದ ರಾಜ್ಯಗಳು ಕಿಲೋಮೀಟರ್ ಪ್ಯಾರಿಟಿಗೆ ಒಪ್ಪುತ್ತಾ ಇರಲಿಲ್ಲ. ಡಿಸೆಂಬರ್ ತಿಂಗಳಲ್ಲಿ ನಡೆದ ಸಭೆಗೆ ಅಂತರ ರಾಜ್ಯಗಳಾದ ತಮಿಳುನಾಡು, ಆಂಧ್ರಪ್ರದೇಶ, ಕೇರಳ, ಮಹಾರಾಷ್ಟ್ರ ಈ ಸರ್ಕಾರಗಳ ಪ್ರತಿನಿಧಿಗಳು ಮತ್ತು ಸಂಬಂಧಪಟ್ಟ ಮಂತ್ರಿಗಳು ಬಂದಿದ್ದರು. ಸಭೆಯಲ್ಲಿ ಕಿಲೋಮೀಟರ್ ಪ್ಯಾರಿಟಿಗೆ ಒಪ್ಪಿಕೊಂಡಿದ್ದಾರೆ. ಕಿಲೋಮೀಟರ್ ಪ್ಯಾರಿಟಿ ಅಗ್ರಿಮೆಂಟ್ ಮಾಡಿರಲಿಲ್ಲ. ಬೇರೆ ರಾಜ್ಯಗಳೂ ಸಹಿತ ಒಪ್ಪಿಕೊಂಡಿರುವುದರಿಂದ, ನಮಗೆ ಇದರಿಂದ ಅನುಕೂಲವಾಗುತ್ತದೆ. ಕೆ.ಎಸ್.ಆರ್.ಟಿ.ಸಿಗೂ ಅನುಕೂಲವಾಗುತ್ತದೆಂದು ತಿಳಿದುಕೊಂಡಿದ್ದೇನೆ. ೧೫ ಕಿಲೋಮೀಟರ್ ಇಂಟರ್‌ಸ್ಟೇಟ್ ಒಳಗಡೆ ಯಾವಾಗ ಮಾಡುತ್ತೀರಿ ಎಂದು ಕೇಳಿದ್ದಾರೆ. ಎರಡು ಪಕ್ಕದ ರಾಜ್ಯ ಸರ್ಕಾರಗಳ ಜೊತೆ ಮಾತುಕತೆ ನಡೆಯುತ್ತಿದೆ. ಇದಕ್ಕೆ ನಿರ್ದಿಷ್ಟವಾದ ಸಮಯ ಹೇಳುವುದು ಕಷ್ಟವಾಗುತ್ತದೆ ಇದನ್ನು ಆದಷ್ಟು ಬೇಗ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಕಿಲೋಮೀಟರ್ ಪ್ಯಾರಿಟಿಯಲ್ಲಿ ೩೦೦ ಕಿ. ಮೀ. ಬಂದಿದೆ. ನನ್ನ ಲೆಕ್ಕಾಚಾರದ ಪ್ರಕಾರ ೩೦ ಕಿ.ಮೀ. ಮಾತ್ರ ಬಂದಿದೆ. ಇದರಿಂದ ನಮಗೆ ಮೋಸ ಆಗಿದೆ. ಇದನ್ನು ಆದಷ್ಟು ಬೇಗ ಸರಿಪಡಿಸಿ, ನಮ್ಮ ರಾಜ್ಯಕ್ಕೆ ನ್ಯಾಯ ದೊರಕಿಸಿಕೊಡುತ್ತೀರಾ ?

ಶ್ರೀ ಪಿ.ಜಿ.ಆರ್. ಸಿಂಧ್ಯ—ಎಕ್ಸಿಸ್ಟಿಂಗ್ ಕಿಲೋಮೀಟರ್ ಪ್ಯಾರಿಟಿಯಿಂದ ನಮಗೆ ಡಿಸ್-ಅಡ್ವಾಂಟೇಜ್ ಇತ್ತು. ಬಸ್ ಪ್ಯಾರಿಟಿ ಕೇಳುತ್ತಿದ್ದೇವೆ. ಇದು ಆದ ಮೇಲೆ ಅನುಕೂಲವಾಗಬಹುದು.

ತರೀಕೆರೆ ತಾಲ್ಲೂಕಿನಲ್ಲಿ ಸಾಕಷ್ಟು ಬಸ್ಸು ಸೌಕರ್ಯವಿಲ್ಲದಿರುವುದು.

೧೫೭೭. **ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).**—ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ತರೀಕೆರೆ ತಾಲ್ಲೂಕಿನಲ್ಲಿ ಸಾಕಷ್ಟು ಪ್ರಮಾಣದ ಬಸ್ಸು ಸೌಕರ್ಯವಿಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಈ ಬಗ್ಗೆ ಸ್ಥಳೀಯ ಶಾಸಕರು ಅನೇಕ ಮನವಿಗಳನ್ನು ಸಲ್ಲಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಆ ಬಗ್ಗೆ ಕೈಗೊಂಡ ಕ್ರಮವೇನು ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಸಚಿವರು).—

ಅ) ಬಂದಿದೆ.

ಆ) ಬಂದಿದೆ.

ಇ) ಸಾಧ್ಯವಾದ ಸಲಹೆಗಳ ಬಗ್ಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಕ್ರಮ ತೆಗೆದುಕೊಂಡಿದೆ.

ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).— ಮಾನ್ಯ ಅಧ್ಯಕ್ಷರೇ, ಇವರ ಉತ್ತರವನ್ನು ನೋಡಿದರೆ, ಸಮುದ್ರದ ನಂಟು, ಆದರೆ ಉಪ್ಪಿಗೆ ಬರ, ಎಂಬಂತೆ ಬೆಂಗಳೂರು, ಹೊನ್ನಾವರಕ್ಕೆ ಬೇಕಾದಷ್ಟು ಬಸ್ ಇದ್ದರೂ ತರೀಕೆರೆಯಲ್ಲಿ ನಿಲ್ಲುವುದಿಲ್ಲ. ತರೀಕೆರೆ ತಾಲ್ಲೂಕಿನಲ್ಲಿ ಸಾಕಷ್ಟು ಬಸ್ ಸೌಕರ್ಯವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ ''ಬಂದಿದೆ'' ಎಂದೂ ಹೇಳಿದ್ದಾರೆ. ತರೀಕೆರೆ ಬಿ. ಹೆಚ್. ರೋಡಿನಲ್ಲಿದೆ. ಇಲ್ಲಿ ಹೆಚ್ಚು ಬಸ್ಸುಗಳ ಅನುಕೂಲವಿಲ್ಲದೆ,